# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)

ದೂರವಾಣಿ ಸಂಖ್ಯೆ : 0821-2417106
ಫ್ಯಾಕ್ಸ್ ಸಂಖ್ಯೆ : 0821-2417105
E-mail:cfo@cescmysore.org
CIN No: U40109KA2004SGC035177

ನಿಗಮ ಕಾರ್ಯಾಲಯ,
ನಂ 29, ವಿಜಯನಗರ, 2ನೇ ಹಂತ,
ಹಿನಕಲ್,
ಮೈಸೂರು-570 017.

**ವಿಷಯ:** 2020-21ನೇ ಸಾಲಿನ 2ನೇ ತ್ರೈಮಾಸಿಕ ಅವಧಿಗೆ ಲೆಕ್ಕಶೀರ್ಷಿಕೆ 74, 75 ಮತ್ತು 76 ರಡಿಯಲ್ಲಿ ಕಂದಾಯ ಬಡ್ಜೆಟ್ ಮತ್ತು ಅಗತ್ಯ ಲೆಕ್ಕಶೀರ್ಷಿಕೆಗಳಿಗೆ ಖರೀದಿ ಅನುದಾನವನ್ನು ತಾತ್ಕಲಿಕವಾಗಿ (Tentative) ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:**-1) ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ ಸಿವೈಎಸ್ 22 ದಿನಾಂಕ 08.04.2020.
2) ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ 1355 ದಿನಾಂಕ 28.04.2020.
3) ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ 1637 ದಿನಾಂಕ 04.05.2020.
4) ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ ಸಿವೈಎಸ್ 3760 ದಿನಾಂಕ 10.06.2020.

********

**ಪೀಠಿಕೆ:**

1. ಉಲ್ಲೇಖ (1) ರಡಿಯಲ್ಲಿ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ಚಾ.ವಿ.ಸ.ನಿ.ನಿ ಯ ಎಲ್ಲಾ ಲೆಕ್ಕಘಟಕಗಳಿಗೆ ವಿತ್ತ ವರ್ಷ-2020-21 ನೇ ಸಾಲಿಗೆ ದಿನಾಂಕ 01.04.2020 ರಿಂದ 30.06.2020 ರ ಮೊದಲನೇ ತ್ರೈಮಾಸಿಕ ಅವಧಿಗೆ ಮುಖ್ಯ ಲೆಕ್ಕಶೀರ್ಷಿಕೆ 74, 75 ಮತ್ತು 76 ರಡಿಯಲ್ಲಿ ಒಟ್ಟು 16391.00 ಲಕ್ಷಗಳ ಕಂದಾಯ ಬಜೆಟ್/ ಖರೀದಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

2. ಉಲ್ಲೇಖ (2) ರಡಿಯಲ್ಲಿ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ಪ್ರದಾನ ವ್ಯವಸ್ಥಾಪಕರು (ಖರೀದಿ) ಶಾಖೆಗೆ ಕಛೇರಿ ಲೆಕ್ಕಶೀರ್ಷಿಕೆ 74.8027 (Repairs to Computers & Printers) ರಡಿಯಲ್ಲಿ ರೂ. 5.00 ಲಕ್ಷ ಹಾಗೂ ಲೆಕ್ಕಶೀರ್ಷಿಕೆ 76.1537 (Prinitng and Stationary) ರಡಿಯಲ್ಲಿ ಮುದ್ರಣ ಮತ್ತು ಇತರೆಗಾಗಿ ರೂ. 50.00 ಲಕ್ಷಗಳ ಕಂದಾಯ ಬಜೆಟ್/ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

3. ಉಲ್ಲೇಖ (3) ಪ್ರದಾನ ವ್ಯವಸ್ಥಾಪಕರು (ತಾಂತ್ರಿಕ) ಶಾಖೆಯಿಂದ ಕಛೇರಿ ಟಿಪ್ಪಣಿ ಮೂಲಕ ಕೋರೋನ ವೈರಸ್ ತಡೆಗಟ್ಟುವ ಸಂಬಂಧ ಮುಂಜಾಗ್ರಾತಾ ಕ್ರಮವಾಗಿ ಮೈಸೂರು ನಗರದ ವಿವಿಧ ಸ್ಥಳಗಳಲ್ಲಿ ಹೊಸದಾಗಿ ಸ್ಥಾಪಿಸಿರುವ ಮಾರುಕಟ್ಟೆಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸುವ ಸಲುವಾಗಿ ತಾತ್ಕಾಲಿಕ ವಿದ್ಯುತ್ ದೀಪಗಳನ್ನು ಅಳವಡಿಸಲು ಒಟ್ಟಾರೆ ರೂ. 3.00 ಲಕ್ಷಗಳ ಕಂದಾಯ ಬಜೆಟ್/ಅನುದಾನವನ್ನು ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿಗೆ ಬಿಡುಗಡೆ ಮಾಡಲಾಗಿದೆ.

4. ಉಲ್ಲೇಖ (4) ರಡಿಯಲ್ಲಿ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿ ಮೈಸೂರುರವರಿಗೆ ಲೆಕ್ಕಶೀರ್ಷಿಕೆ 74,76 ರಡಿಯಲ್ಲಿ ರೂ.220.00 ಲಕ್ಷಗಳ ಹೆಚ್ಚುವರಿ ಕಂದಾಯ ಬಜೆಟ್/ಖರೀದಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ವಿತ್ತ ವರ್ಷ 2020-21 ನೇ ಸಾಲಿನ 2 ನೇ ತ್ರೈಮಾಸಿಕಕ್ಕೆ ಕಂದಾಯ ಬಡ್ಜೆಟ್/ಅನುದಾನವನ್ನು ಬಿಡುಗಡೆಗೊಳಿಸುವ ಸಂಬಂಧ ಈ ಕೆಳಗಿನಂತೆ ಆದೇಶಿಸಿದೆ.

Scanned with CamScanner

ಕ್ರ.ಸಂ. ಮುಆಅ/ಪ್ರವ್ಯ(ಲೆ&ಸಂ)/ಉಪ್ರವ್ಯ(ಸಂ&ಆವ್ಯ)/ಸಪ್ರವ್ಯ(ಹ&ಸಂ)/ವ್ಯ(ಹ&ಸಂ)/ Cys-478 ದಿನಾಂಕ: 15 JUL 2020

## ಅಧಿಕೃತ ಜ್ಞಾಪನಾ ಪತ್ರ

2020-21ನೇ ಸಾಲಿನ 2ನೇ ತ್ರೈಮಾಸಿಕ ಅವಧಿ ದಿನಾಂಕ:01.07.2020 ರಿಂದ 30.09.2020ಕ್ಕೆ ಅನ್ವಯವಾಗುವಂತೆ ನಿಗಮದ ಎಲ್ಲಾ ಲೆಕ್ಕಘಟಕಗಳಿಗೆ ಅಗತ್ಯವಿರುವ ಕಂದಾಯ ವೆಚ್ಚಗಳಿಗೆ ಲೆಕ್ಕ ಶೀರ್ಷಿಕೆ 74, 75 ಮತ್ತು 76ರ ಅಡಿಯಲ್ಲಿ ಒಟ್ಟು ರೂ. 15967.81 ಲಕ್ಷಗಳ ಕಂದಾಯ ಬಡ್ಜೆಟ್/ಖರೀದಿ ಅನುದಾನವನ್ನು ತಾತ್ಕಲಿಕವಾಗಿ (Tentative) ಬಿಡುಗಡೆಗೊಳಿಸಲಾಗಿದೆ. ಲೆಕ್ಕ ಶೀರ್ಷಿಕೆವಾರು ಮೊತ್ತದ ವಿವರಗಳನ್ನು ಪ್ರತ್ಯೇಕ ಅನುಬಂಧದಲ್ಲಿ ನಮೂದಿಸಿದ್ದು ವೆಚ್ಚವನ್ನು ಈ ಕೆಳಗಿನ ನಿಬಂಧನೆಗಳಿಗೆ ಒಳಪಟ್ಟು ನಿರ್ವಹಿಸಲು ಸೂಚಿಸಿದೆ.

1. ಲೆಕ್ಕ ಘಟಕಗಳು ಏಪ್ರಿಲ್-19 ರಿಂದ ಮಾರ್ಚ್-20ರ ಅವಧಿಯಲ್ಲಿ ದಾಖಲಿಸಿರುವ ವೆಚ್ಚವನ್ನು ಆಧರಿಸಿ ವಿತ್ತ ವರ್ಷ-2020-21ನೇ ಸಾಲಿನ 2ನೇ ತ್ರೈಮಾಸಿಕ ಅವಧಿಗೆ ತಾತ್ಕಲಿಕವಾಗಿ ಅನುಬಂಧ 1 ಮತ್ತು 2 ರಲ್ಲಿ ಕಂದಾಯ ಬಡ್ಜೆಟ್‌ನ್ನು ಬಿಡುಗಡೆ ಮಾಡಲಾಗಿದೆ.

2. **ಲೆಕ್ಕ ಶೀರ್ಷಿಕೆ 74.1, 74.5, 74.6, 74.8, ಮತ್ತು 76** (ಆಂತರಿಕ ನಿರ್ವಹಣೆ ಶಾಖೆ ನಿಗಮ ಕಛೇರಿ ಅಂಕಣವನ್ನು ಹೊರತುಪಡಿಸಿ )ರಡಿಯಲ್ಲಿ ಎಲ್ಲಾ ಲೆಕ್ಕಘಟಕಗಳ ಪರವಾಗಿ ವಲಯ ಕಛೇರಿಗಳಿಗೆ ಬಿಡುಗಡೆ ಮಾಡಿರುವ ಕಂದಾಯ ಬಡ್ಜೆಟ್/ಖರೀದಿ ಅನುದಾನವನ್ನು ಮುಖ್ಯ ಇಂಜಿನಿಯರ್(ವಿ), ಮೈಸೂರು/ಹಾಸನ ವಲಯ ಕಛೇರಿಯಿಂದ ಲೆಕ್ಕಘಟಕಗಳಿಗೆ ಅಗತ್ಯತೆಗೆ ಅನುಗುಣವಾಗಿ ಮರು ಹಂಚಿಕೆ ಮಾಡುವುದು. ಹಾಗೂ ಎಫ್‌ಎಂಎಸ್ ತತ್ರಾಂಶದಲ್ಲಿ ಅಳವಡಿಸಲು ಕ್ರಮಕೈಗೊಳ್ಳುವುದು.

3. ಯಾವುದೇ ಕಾರಣಕ್ಕೂ ಬಡ್ಜೆಟ್ ಅನುಮೋದನೆ ಇಲ್ಲದೇ ಖರ್ಚು ಮಾಡಲು ಅವಕಾಶವಿರುವುದಿಲ್ಲ.

4. ಸದರಿ ಲೆಕ್ಕ ಶೀರ್ಷಿಕೆಗಳಲ್ಲಿ ಬಿಡುಗಡೆಗೊಳಿಸಿರುವ ಬಡ್ಜೆಟ್ ಮೊತ್ತವನ್ನು ಸಂಪೂರ್ಣವಾಗಿ ಖರ್ಚು ಮಾಡಲೇಬೇಕೆಂಬ ನಿಬಂಧನೆಯಿರುವುದಿಲ್ಲ. ಯಾವುದೇ ವೆಚ್ಚಗಳನ್ನು ನಿಗಮದ ಆರ್ಥಿಕ ಸ್ಥಿತಿಯನ್ನು ಮತ್ತು ಪ್ರಸ್ತುತ ಮಾರುಕಟ್ಟೆಯ ವಾಸ್ತವಿಕ ವೆಚ್ಚಗಳನ್ನು ಗಮನದಲ್ಲಿರಿಸಿಕೊಂಡು ನಿಯಮಿತವಾಗಿ ಖರ್ಚು ಮಾಡತಕ್ಕದ್ದು.

5. ಯಾವುದೇ ಲೆಕ್ಕ ಶೀರ್ಷಿಕೆಯಡಿ ನಿಗದಿತ ಬಡ್ಜೆಟ್ ಮೀರಿ ವೆಚ್ಚವಾಗಬೇಕಿದ್ದಲ್ಲಿ ಹೆಚ್ಚುವರಿ ಬಡ್ಜೆಟ್ ಮೊತ್ತಕ್ಕೆ ಆಂತರಿಕ ಲೆಕ್ಕ ಪರಿಶೋಧನೆಯಿಂದ ದೃಢೀಕರಿಸಿ, ವಲಯ ಕಛೇರಿ ಮೈಸೂರು/ಹಾಸನರವರ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ನಿಗಮ ಕಾರ್ಯಾಲಯಕ್ಕೆ ಸಲ್ಲಿಸಿ ಪೂರ್ವಭಾವಿ ಅನುಮೋದನೆ ಪಡೆಯುವುದು.

6. ಅಧಿಕ ಬಜೆಟ್ ಮಂಜೂರು ಮಾಡಬೇಕಿದ್ದಲ್ಲಿ, ಈಗಾಗಲೇ ಇರುವ ಬಜೆಟ್ ಮರು ಹಂಚಿಕೆಮಾಡಿದ ನಂತರವೇ ಪ್ರಸ್ತಾವನೆಯನ್ನು ಸಲ್ಲಿಸುವುದು.

7. ಮುಂದಿನ ತ್ರೈಮಾಸಿಕಕ್ಕೆ ಬಡ್ಜೆಟ್ ಬಿಡುಗಡೆಗೊಳಿಸುವ ಮೊದಲು ಹಿಂದಿನ ತ್ರೈಮಾಸಿಕದ ಬಡ್ಜೆಟ್ ಮೊತ್ತ ಉಪಯೋಗವಾದ ಬಗ್ಗೆ ಮಾಹಿತಿಯನ್ನು ತ್ರೈಮಾಸಿಕ ಮುಕ್ತಾಯಕ್ಕೆ ಮೊದಲೇ ಅಂದರೆ 15 ದಿನಗಳ ಮುಂಚೆಯೇ **ಎಲ್ಲಾ ಲೆಕ್ಕಘಟಕಗಳ ಮಾಹಿತಿಯನ್ನು ಕ್ರೋಢೀಕರಿಸಿ ಮೈಸೂರು/ಹಾಸನ ವಲಯ ಕಛೇರಿಯವರು ಕಡ್ಡಾಯವಾಗಿ ನಿಗಮ ಕಾರ್ಯಾಲಯಕ್ಕೆ ಸಲ್ಲಿಸುವುದು.**

8. ಸದರಿ ರೆವಿನ್ಯೂ ಶೀರ್ಷಿಕೆಗಳಲ್ಲಿ ಪ್ರತಿ ತಿಂಗಳು ಉಂಟಾಗುವ ವೆಚ್ಚದ ಮಾಹಿತಿಯನ್ನು ಲೆಕ್ಕ ಘಟಕಗಳು ನಂತರದ ತಿಂಗಳ 10ನೇ ತಾರೀಖಿನೊಳಗೆ ತಪ್ಪದೇ ನಿಗಮ ಕಾರ್ಯಾಲಯಕ್ಕೆ ಸಲ್ಲಿಸುವುದು.

9. ಲೆಕ್ಕಘಟಕಗಳು ಹೆಚ್ಚುವರಿ ಕಂದಾಯ ಬಡ್ಜೆಟ್‌ನ ಪ್ರಸ್ತಾವನೆಯನ್ನು ನೇರವಾಗಿ ನಿಗಮ ಕಛೇರಿಗೆ ಸಲ್ಲಿಸಿದಲ್ಲಿ ಅದನ್ನು ಯಾವುದೇ ಕಾರಣಕ್ಕೂ ಪರಿಗಣಿಸುವುದಿಲ್ಲ. ಪ್ರಸ್ತಾವನೆಗಳನ್ನು ಕಡ್ಡಾಯವಾಗಿ ವಲಯ ಕಛೇರಿ, ಮೈಸೂರುರವರ ಶಿಫಾರಸ್ಸಿನೊಂದಿಗೆ ಮಾತ್ರ ಸಲ್ಲಿಸತಕ್ಕದ್ದು.

Scanned with CamScanner

10. ಲೆಕ್ಕಘಟಕಗಳು ಕಂದಾಯ ವೆಚ್ಚಗಳನ್ನು ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಿಗೆ ಅನುಗುಣವಾಗಿ ವೆಚ್ಚಗಳನ್ನು ದಾಖಲಿಸುವುದು.

11. ನಿಧಿಕೋರಿಕೆ ಪ್ರಸ್ತಾವನೆಯನ್ನು ಸಲ್ಲಿಸುವಾಗ ಆಂತರಿಕ ಲೆಕ್ಕಪರಿಶೋಧಕರು ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಲ್ಲಿ ಅಗತ್ಯ ಕಂದಾಯ ಬಡ್ಜೆಟ್ ಮಂಜೂರಾಗಿರುವ ಬಗ್ಗೆ ಪರಿಶೀಲನೆ ಮಾಡುವುದು. ಹೆಚ್ಚುವರಿ ಬಡ್ಜೆಟ್ ಅಗತ್ಯವಿದ್ದಲ್ಲಿ ಮಂಜೂರು ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿ ಮಂಜೂರಾತಿ ಪಡೆಯುವುದು. ತಪ್ಪಿದಲ್ಲಿ ಕೋರಿತ ನಿಧಿಯನ್ನು ಬಿಡುಗಡೆಗೊಳಿಸಲಾಗುವುದಿಲ್ಲ.

ಮುಖ್ಯ ಆರ್ಥಿಕ ಅಧಿಕಾರಿ

ಪ್ರತಿಗಳು:

1. ಮುಖ್ಯ ಇಂಜಿನಿಯರ್(ವಿ),ಮೈಸೂರು/ಹಾಸನ ವಲಯ ಕಛೇರಿ, ಚಾವಿಸನಿನಿ.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು (ಆಂ.ಪ) ನಿಗಮ ಕಛೇರಿ ಚಾ.ವಿ.ಸ.ನಿ.ನಿ.,
3. ಪ್ರಧಾನ ವ್ಯವಸ್ಥಾಪಕರು, ಲೆಕ್ಕಗಳು ಮತ್ತು ಕಂದಾಯ ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
4. ನಿಯಂತ್ರಣಾಧಿಕಾರಿ, ಕಾರ್ಯ ಮತ್ತು ಪಾಲನೆ ಮೈಸೂರು/ಹಾಸನ ವಲಯ ಕಛೇರಿ ಚಾವಿಸನಿನಿ.
5. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ಮೈಸೂರು/ಹಾಸನ ವಲಯ ಕಛೇರಿ ಚಾವಿಸನಿನಿ,
6. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಕಛೇರಿ, ಚಾವಿಸನಿನಿ,
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾ ಮತ್ತು ಪಾ ವಿಭಾಗ, ಚಾವಿಸನಿನಿ.
8. ಉಪಪ್ರಧಾನ ವ್ಯವಸ್ಥಾಪಕರು(ವಿ), ಎಂ.ಐ.ಎಸ್ ಶಾಖೆ, ನಿಗಮ ಕಛೇರಿ, ಮೈಸೂರು–ಚಾ.ವಿ.ಸ.ನಿ.ನಿ.,– ಅಂತರ್ಜಾಲದಲ್ಲಿ ಪ್ರಕಟಿಸಲು.
9. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ಲೆಕ್ಕಪರಿಶೋಧನೆ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ.
10. ವ್ಯವಸ್ಥಾಪಕರು(ಹ ಮತ್ತು ಸಂ), ಸಂಪನ್ಮೂಲ ಶಾಖೆ/ಮುಖ್ಯ ಕಡತ.

Scanned with CamScanner